# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1633/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಓ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 03/01/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಶ್ರೀನಿವಾಸ ಸಿ.ವಿ. ತಂದೆ ಲೇಟ್ ವೆಂಕಟಸ್ವಾಮಿ, ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ಚಿಕ್ಕಬಳ್ಳಾಪುರ ಜಿಲ್ಲೆ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು ಇವರು ಚಿಕ್ಕಬಳ್ಳಾಪುರ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಶ್ರೀನಿವಾಸ ಸಿ.ವಿ. ತಂದೆ ಲೇಟ್ ವೆಂಕಟಸ್ವಾಮಿ, ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ಚಿಕ್ಕಬಳ್ಳಾಪುರ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಶ್ರೀ ಎಸ್. ಎಂ. ಹರೀಶ್ ತಂದೆ ಮುನಿಕೃಷ್ಣಪ್ಪ, ವಾಸ: ಸೋಮೇಶ್ವರ ಗ್ರಾಮ, ಸೋಮೇನಹಳ್ಳಿ ಹೋಬಳಿ, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರ ತಂದೆಯಾದ ಶ್ರೀ ಮುನಿಕೃಷ್ಣಪ್ಪ ಇವರ ಹೆಸರಿನಲ್ಲಿರುವ ಸೋಮೇಶ್ವರ ಗ್ರಾಮದ ಸ. ನಂ. 41 ಮತ್ತು 42 ರ ಜಮೀನಿನಲ್ಲಿ 'ಗಂಗಾ ಕಲ್ಯಾಣ' ಯೋಜನೆಯಡಿಯಲ್ಲಿ 2016-17 ನೇ ಸಾಲಿನಲ್ಲಿ ಬೋರ್‌ವೆಲ್ ಕೊರೆಯಿಸಿ ಕೊಡಲು ಅರ್ಜಿಯನ್ನು ಸಲ್ಲಿಸಿದ್ದು 2018 ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಮಹರ್ಷಿ ವಾಲ್ಮೀಕಿ

ಪರಿಶಿಷ್ಟ ಪಂಗಡಗಳ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಉಚಿತವಾಗಿ ಬೋರ್‌ವೆಲ್‌ನ್ನು ಕೊರೆಯಿಸಲಾಗಿರುತ್ತದೆ. ಆದರೆ ಸದರಿ ಬೋರ್‌ವೆಲ್‌ಗೆ ಪಂಪು, ಪೈಪು ಮತ್ತು ಮೋಟಾರನ್ನು ಚಿಕ್ಕಬಳ್ಳಾಪುರ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ನಿಗಮದಿಂದ ಉಚಿತವಾಗಿ ವಿತರಿಸಬೇಕಾಗಿದ್ದು ದೂರುದಾರರ ತಂದೆ ಅನಕ್ಷರಸ್ಥರಾಗಿದ್ದು ಸದರಿ ವಸ್ತುಗಳನ್ನು ವಿತರಿಸಿರುವುದಿಲ್ಲ. ದೂರುದಾರರು ಎದುರುದಾರರನ್ನು ಭೇಟಿ ಮಾಡಲಾಗಿ ಪಂಪು, ಪೈಪು ಮತ್ತು ಮೋಟಾರನ್ನು ಹಂಚಿಕೆ ಮಾಡಲು ರೂ. 10,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿಯವರು ಮುಂಗಡವಾಗಿ ರೂ. 5,000/- ಪಡೆದು ಉಳಿದ ಹಣಕ್ಕೆ ಮೊಬೈಲ್ ಮೂಲಕ ವಿಚಾರಿಸಲಾಗಿ ಲಂಚದ ಹಣ ಬೇಡಿಕೆ ಇಟ್ಟ ಬಗ್ಗೆ ವಾಯ್ಸ್ ರೆಕಾರ್ಡ್ ಮಾಡಿಕೊಂಡಿದ್ದು ಸದರಿ ಲಂಚದ ಹಣ ದೂರುದಾರರಿಗೆ ನೀಡಲು ಇಷ್ಟವಿಲ್ಲದ ಕಾರಣ, ಚಿಕ್ಕಬಳ್ಳಾಪುರ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 02/11/2018 ರಂದು ನೀಡಿರುತ್ತಾರೆ. ಈ ಬಗ್ಗೆ ಚಿಕ್ಕಬಳ್ಳಾಪುರ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 07/2018 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 02/11/2018 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಫೋನ್‌ನಲ್ಲಿ ವಾಯ್ಸ್ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಲಿಪಿಕರಣ ಮಾಡಿ ಮೊಬೈಲ್‌ನಲ್ಲಿದ್ದ ಮೆಮೋರಿ ಕಾರ್ಡನ್ನು ಖಾಲಿ ಕವರಿನಲ್ಲಿ ಹಾಕಿ ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 2,000/- ದೂರುದಾರರು ಹಾಜರುಪಡಿಸಿದ್ದು ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆಯಲಾಯಿತು. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಅಯುಬ್ ಅಬ್ದುಲ್ಲಾ ಬಿನ್ ಆರ್. ಮೆಹಬೂಬ ಪಾಷ ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ

ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಗಳು ನೀಡಿದ ಡಿಜಿಟಲ್ ವಾಯ್ಸ್ ರೆಕಾರ್ಡರ್‌ನಲ್ಲಿ ಧ್ವನಿ ಸಂಭಾಷಣೆಯನ್ನು ರೆಕಾರ್ಡ್ ಮಾಡಲು ದೂರುದಾರರಿಗೆ ತಿಳಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ತಲೆಯನ್ನು ಬಲಗೈಯಿಂದ ಸವರಿಕೊಳ್ಳುವುದರ ಮೂಲಕ ಸೂಚನೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ದಿನಾಂಕ 02/11/2018 ರಂದು ಬೆಂಗಳೂರಿನ ರಾಜಾಜಿನಗರದ ಇಂಡಸ್ಟ್ರೀಯಲ್ ಎಸ್ಟೇಟಿನ 5ನೇ ಕ್ರಾಸ್‌ನ ರಸ್ತೆಯ ತಿರುವಿನ ಮೆ: ಜೆ.ಪಿ.ಟಿ. ಎಲೆಕ್ಟ್ರಾನಿಕ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಕಾರ್ಖಾನೆಯ ಮುಂಭಾಗದಲ್ಲಿ ದೂರುದಾರರು ನೆರಳು ಸಾಕ್ಷಿ ಅಯುಬ್ ಅಬ್ದುಲ್ಲಾ ಬಿನ್ ಆರ್. ಮೆಹಬೂಬ ಪಾಷ ಇವರ ಸಮಕ್ಷಮ ಪಂಪ್ ಮತ್ತು ಮೋಟಾರ್ ವಿತರಿಸಲು ದೂರುದಾರರಿಂದ ರೂ. 2,000/- ಅದೇ ರೀತಿ ದೂರುದಾರರ ಸಂಬಂಧಿಕರಾದ ವೆಂಕಟೇಶ್ ಬಿನ್ ಕೊಂಡಪ್ಪ, ವೀರರಾವುತನಹಳ್ಳಿ ಗ್ರಾಮ, ಸೋಮೇನಹಳ್ಳಿ ಹೋಬಳಿ, ಗುಡಿಬಂಡೆ ತಾಲ್ಲೂಕು ಇವರು ನೀಡಿದ ರೂ. 1500/- ಲಂಚದ ಹಣ ಒಟ್ಟು ರೂ. 3,500/- ಗಳನ್ನು ಎದುರುದಾರರ ಬೇಡಿಕೆಯ ಮೇರೆಗೆ ನೀಡಿದ್ದು ಅದನ್ನು ಬಲಗೈನಿಂದ ಸ್ವೀಕರಿಸಿ ಎಣಿಸಿಕೊಂಡು ತಮ್ಮ ಶರ್ಟಿನ ಎಡಭಾಗದಲ್ಲಿ ಇಟ್ಟುಕೊಂಡಿದ್ದನ್ನು ಎದುರುದಾರರು ಹಾಜರುಪಡಿಸಿದ್ದು ಸದರಿ ನೋಟುಗಳ ಮೌಲ್ಯ ನೋಟುಗಳ ನಂಬರ್ ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದಂತಹ ನೋಟುಗಳ ನಂಬರಿಗೂ ಮೌಲ್ಯಕ್ಕೂ ತಾಳೆಯಾಗಿದ್ದು ಇರುತ್ತದೆ. ಸದರಿ ಲಂಚದ ಹಣವಾದ 3,500/- ರೂ.ಗಳನ್ನು ಎದುರುದಾರರಿಂದ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಕಾಲದಲ್ಲಿ ಎದುರುದಾರರು ಟ್ರಾಪ್‌ಗೆ ಒಳಗಾದ ಸ್ಥಳವು ಸಾರ್ವಜನಿಕರು ಓಡಾಡುವ ರಸ್ತೆಯಾಗಿದ್ದರಿಂದ ಅವರನ್ನು ಟಾಟಾ ಸುಮೋದ ವಾಹನದ ಮುಂಭಾಗದ ಬ್ಯಾನೆಟ್ ಮೇಲೆ ತನಿಖಾಧಿಕಾರಿಗಳು ನೀಡಿದ ಸೂಚನೆಯಂತೆ ಒಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳು ಹಾಗೂ ಎಡಗೈ ಬೆರಳುಗಳನ್ನು ಪ್ರತ್ಯೇಕವಾಗಿ ಅದ್ದಿ ತೊಳೆದಾಗ ದ್ರಾವಣವು ತಿಳಿ

ಗುಲಾಬಿ ಬಣ್ಣಕ್ಕೆ ತಿರುಗಿದ್ದು ಸದರಿ ದ್ರಾವಣವನ್ನು ಪ್ರತ್ಯೇಕವಾಗಿ ಖಾಲಿ ಬಾಟಲ್‌ಗೆ ಹಾಕಿ ದೂರುದಾರ ಹಾಗೂ ಪಂಚರ ಸಮಕ್ಷಮ ವಶಪಡಿಸಿಕೊಂಡಿದ್ದು ಇರುತ್ತದೆ. ಎದುರುದಾರರಿಗೆ ಬೇರೆ ಶರ್ಟಿನ ವ್ಯವಸ್ಥೆ ಮಾಡಿ ಆತನು ಧರಿಸಿದ್ದ ಶರ್ಟನ್ನು ಬಿಚ್ಚಿಸಿ ಸದರಿ ಶರ್ಟಿನ ಎಡಭಾಗದ ಜೇಬನ್ನು ಹೊರಭಾಗಕ್ಕೆ ತೆಗೆದು ಅದನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಸದರಿ ಶರ್ಟನ್ನೂ ಸಹ ತನಿಖಾಧಿಕಾರಿಯವರು ಪಂಚರ ಸಮಕ್ಷಮ ಅಮಾನತ್ ಪಡಿಸಿಕೊಂಡಿರುತ್ತಾರೆ. ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಶ್ರೀ ಅಯುಬ್ ಅಬ್ದುಲ್ಲಾ ತಂದೆ ಆರ್. ಮೆಹಬೂಬ ಪಾಷ, ಸಹ ಪಂಚ ಅವರಿಂದ ಅಲ್ಲಿಯ ನಡುವಳಿಕೆಗಳನ್ನು ತಿಳಿದು ಸವಿಸ್ತಾರ ಜಪ್ತಿ ಪಂಚನಾಮೆ ನಿರ್ವಹಿಸಿ, ದೂರುದಾರರ ಹಾಗೂ ಪಂಚರ ಸಮಕ್ಷಮ ಸದರಿ ಹಣ, ಮುದ್ದೆ ಮಾಲುಗಳನ್ನು ತನಿಖಾಧಿಕಾರಿಗಳು ವಶಪಡಿಸಿ ಕೊಂಡಿರುತ್ತಾರೆ. ಟ್ರಾಪ್ ಕಾಲದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಆಗಿದ್ದನ್ನು ಲ್ಯಾಪ್‌ಟಾಪ್‌ಗೆ ಹಾಕಿ ಕೇಳಿಸಿ ಸಿ.ಡಿ. ರೆಕಾರ್ಡ್ ಮಾಡಿ ಲಿಪೀಕರಣ ಮಾಡಿ ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರಿಗೆ ಸಮಜಾಯಿಷಿ ಕೇಳಲಾಗಿ ಅವರು ತಮ್ಮ ಸಮಜಾಯಿಷಿಯಲ್ಲಿ "ಶ್ರೀ ಹರೀಶ್ ಹಾಗೂ ವೆಂಕಟೇಶ್ ಇಬ್ಬರೂ ಸುಮಾರು 15 ದಿನಗಳಿಂದ ಪಂಪು ಮೋಟಾರು ಕೊಡಿಸುವಂತೆ ಹಣ ನೀಡುತ್ತೇವೆ ಎಂದು ಕೋರಿರುತ್ತಾರೆ. ಆದರೆ ಸದರಿಯವರು ನಿಜವಾದ ಫಲಾನುಭವಿಯಾಗಿರುವುದಿಲ್ಲ. ದಿನಾಂಕ 02/11/2018 ರಂದು ಅಕ್ವಾಸಬ್ ಇಂಜಿನಿಯರಿಂಗ್ ಕಂಪನಿಯ ಹತ್ತಿರ ಬಂದಿರುತ್ತಾರೆ. ಸದರಿಯವರು ಯಾವುದೇ ವಾಹನವನ್ನು ತೆಗೆದುಕೊಂಡು ಬಂದಿರುವುದಿಲ್ಲ. ಆಗ ನಾನು ಅವರ ಊರಿಗೆ ರೂ. 3,500/- ಗಳ ವಾಹನವನ್ನು ಬಾಡಿಗೆಗೆ ಮಾತನಾಡಿ ಪಂಪು ಮೋಟರ್ ವಾಹನಕ್ಕೆ ತುಂಬಿಸಿ ಸುಮಾರು 3,500/- ರೂ.ಗಳನ್ನು ವಾಹನದ ಚಾಲಕನಿಗೆ ನೀಡುವಂತೆ ಹಣ ನೀಡಿರುತ್ತಾರೆ. ಆ ಸಮಯದಲ್ಲಿ ವಾಹನ ಸ್ವಲ್ಪ ಮುಂದೆ ಹೋಗಿತ್ತು. ಅವರಿಗೆ ಬಾಡಿಗೆ ಹಣವನ್ನು ನೀಡಲು ಹೋಗುವಾಗ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸರು ನನ್ನನ್ನು ವಶಕ್ಕೆ ಪಡೆದಿರುತ್ತಾರೆ" ಎಂದು ಪ್ರತಿರಕ್ಷಣಾ ಹೇಳಿಕೆ ನೀಡಿರುತ್ತಾರೆ. ಆದರೆ ಸದರಿ ಸಮಜಾಯಿಷಿ ಸಕಾರಾತ್ಮಕವಾಗಿರುವುದಿಲ್ಲ.

5) ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಮೊಬೈಲ್‌ನಲ್ಲಿ ಮಾತನಾಡಿದ ಸಂಭಾಷಣೆ, ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಸ್ವೀಕರಿಸಿದ ಬಗ್ಗೆ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ.

6) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 18/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ಜಪ್ತಿ ಮಹಜರ್ ಕಾಲದಲ್ಲಿ ನೀಡಿದ ಪ್ರತಿರಕ್ಷಣಾ ಹೇಳಿಕೆಯಂತೆ ಸಮಜಾಯಿಷಿಯನ್ನು ನೀಡುವುದಲ್ಲದೆ ತಾವು ಯಾವುದೇ ತರಹದ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವುದಿಲ್ಲ ಎಂದು ನೀಡಿರುತ್ತಾರೆ. ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

7) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

8) ಆದ್ದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದೂ ಕೋರಿದೆ.

9) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.